## ಪ್ರಾರ್ಥನೆ

ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ರಚಿಸಿರುವ

### 'ಶ್ರೀಶಾರದಾಸ್ತುತಿಸಪ್ತಕಮ್' ನಿಂದ

ಭವಾಗ್ನೌ ಸಂದಗ್ಧೈಃ ದುರಿತನಿಹತೈಃ ದುಃಖಭರಿತೈಃ
ಹರೇಃ ಹೃತ್ಪದ್ಮಂ ಯದ್ಧ್ಯಹಹ ಮುಕುಲೀಭೂತಸುದಲಮ್।
ಧ್ರುವಂ ತತ್ವ್ರೀಡಾಯಾಃ ತ್ರಿದಿವಮಧುಗಂಗೇವ ಗಲಿತಾ
ದಯಾ ಯಾ ಮಾತಾಽಭೂದವತು ದಯಯಾ
ಮಾಂ ಜಯತು ಸಾತಿ॥

ಸಂಸಾರಾಗ್ನಿಯಲ್ಲಿ ಬೆಂದು, ಕಷ್ಟಗಳ ಆಘಾತವನ್ನೆದುರಿಸಿ ಕೊಂಡು, ದುಃಖಪಡುತ್ತಿರುವ ಜನರನ್ನು ಕಂಡು ಶ್ರೀಹರಿಯ ಹೃದಯಪದ್ಮವು "ಅಯ್ಯೋ" ಎಂದು ಮುಚ್ಚಿಕೊಂಡಿತಂತೆ. ಈ ಬಗೆಯ ಹೃದಯವೇದನೆಯಿಂದ, ಜೇನಿನಂತೆ ಮಧುರವೂ ಗಂಗೆಯಂತೆ ಪವಿತ್ರವೂ ಆದ ಶ್ರೀಹರಿಯ ದಯೆಯೇ ಶ್ರೀಶಾರದಾಮಾತೆಯಾಗಿ ಧರೆಗಿಳಿದುಬಂದಿತು. ಅಂತಹ ಶ್ರೀಮಾತೆಯು ಕರುಣದಿಂದ ನನ್ನನ್ನು ಕಾಪಾಡಲಿ. ಆಕೆಗೆ ಜಯವಾಗಲಿ!

ಶಾಖಾಪಲ್ಲವಪತ್ರಪುಷ್ಪಭರಿತಃ ಕಶ್ಚಿನ್ಮಹಾವಿದ್ರುಮಃ
ಛಾಯಾಂ ಯಚ್ಛತಿ ಶೀತಲಾಮತಿಹಿತಾಂ ಪೌಷ್ಪಂ
ಚ ವರ್ಷಂ ಸುಖಮ್।
ಆತ್ಮಾನಂ ನನು ವೃಶ್ಚತೇಽಪಿ ಸ ಯಥಾ ಮಾತಾ
ತಥಾ ಪೀಡನಂ
ಬಂಧೂನಾಂ ಸತತಂ ಕುಶಿಷ್ಯಚರಿತಂ ಸೋಢ್ವಾ ವರಾನ್ಯಚ್ಛತಿ॥

ಕೊಂಬೆಗಳು, ಚಿಗುರು, ಎಲೆ, ಹೂಗಳು – ಇವುಗಳಿಂದ ಕೂಡಿದ ಮಹಾವೃಕ್ಷವು, ತನ್ನನ್ನು ಕಡಿಯಲು ಬಂದವನಿಗೂ ತಣ್ಣನೆಯ, ಅತಿ ಹಿತಕರವಾದ ನೆರಳನ್ನು ನೀಡುವುದು. ಅದಲ್ಲದೆ, ಅಂತಹವನ ಮೇಲೆ ಸುಖಕರವಾದ ಹೂಮಳೆಯನ್ನೂ ಕರೆಯುವುದು. ಅಂತೆಯೇ ಶ್ರೀಮಾತೆಯೂ ಸಹ ತಮ್ಮ ಬಂಧುಗಳ ಮತ್ತು ಕೆಟ್ಟ ಶಿಷ್ಯರ ಪೀಡೆಗಳೆಲ್ಲವನ್ನೂ ಸಹಿಸಿಕೊಂಡು ಅವರಿಗೆ ವರಗಳನ್ನು ಕೊಡುತ್ತಾಳೆ.

---

## ಸೂಕ್ತಿಪ್ರಭ

### ಶ್ರೀಶಾರದಾದೇವಿಯವರ ಸೂಕ್ತಿಗಳು

- ನಿನ್ನ ಸಾಧನೆ, ಮಾತು ಮತ್ತು ನಡತೆ ಇವುಗಳಲ್ಲಿ ಪ್ರಾಮಾಣಿಕನಾಗಿರು. ಇದರಿಂದ ನೀನು ಧನ್ಯನಾಗುವೆ. ಜಗತ್ತಿನಲ್ಲಿರುವ ಎಲ್ಲಾ ಜೀವಿಗಳ ಮೇಲೂ ಅನುಗ್ರಹ ಸರ್ವದಾ ಹರಿದು ಬರುತ್ತಿರುವುದು. ದೇವರಿಗೆ ಬೇಕಾಗಿರುವುದು ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಪ್ರೇಮ.
- ಭಗವಂತನ ದರ್ಶನ ದೊರೆಯುವುದು ಅವನ ಕೃಪೆಯಿಂದ ಮಾತ್ರ. ಆದರೂ ನಾವು ಧ್ಯಾನ, ಜಪ ಮಾಡಬೇಕು. ಅವು ಮನಸ್ಸಿನ ಮಲಿನತೆಯನ್ನು ನಿವಾರಿಸುತ್ತವೆ. ಭಗವಂತನ ಸ್ಮರಣೆ ಮಾಡುವುದರಿಂದ ಆಧ್ಯಾತ್ಮಿಕ ಜಾಗೃತಿಯುಂಟಾಗುವುದು.
- ಕೆಳಕ್ಕೆ ಹರಿಯುವುದು ನೀರಿನ ಗುಣ. ಆದರೆ ಅದನ್ನು ಸೂರ್ಯನ ಕಿರಣಗಳು ಆಕಾಶದೆತ್ತರಕ್ಕೆ ಏರಿಸಬಲ್ಲುದು. ಅಂತೆಯೇ, ಕ್ಷುಲ್ಲಕ ವಸ್ತುಗಳೆಡೆಗೆ ಹರಿಯುವುದು ಮನಸ್ಸಿನ ಗುಣ. ಆದರೆ, ಭಗವಂತನ ಕೃಪೆ ಅದನ್ನು ಉನ್ನತ ವಿಷಯಗಳತ್ತ ಹೋಗುವಂತೆ ಮಾಡಬಲ್ಲುದು.
- ಶ್ರೀರಾಮಕೃಷ್ಣರು ನನಗೆ ಹೇಳುತ್ತಿದ್ದರು. ಯಾವಾಗಲೂ ಚಟುವಟಿಕೆಯಿಂದಿರಬೇಕು. ಎಂದೂ ಕೆಲಸವಿಲ್ಲದೆ ಕುಳಿತಿರಬಾರದು. ಏಕೆಂದರೆ ಉದಾಸೀನವಾಗಿ ಕುಳಿತಿದ್ದಾಗ, ಎಲ್ಲಾ ಬಗೆಯ ಕೆಟ್ಟ ಆಲೋಚನೆಗಳೂ ಮನಸ್ಸನ್ನು ಹಬ್ಬಿಬಿಡುತ್ತವೆ.
- ಭಗವಂತನ ಚರಣಕಮಲಗಳಲ್ಲೇ ಮನಸ್ಸನ್ನು ಅಚಲವಾಗಿ ಇಡುವುದು, ಅವನ ಸ್ಮರಣೆಯಲ್ಲೇ ಮಗ್ನವಾಗಿರುವುದು– ಆಧ್ಯಾತ್ಮಿಕ ಸಾಧನೆಯೆಂದರೆ ಇದೇ.
- ಇನ್ನೊಬ್ಬರನ್ನು ಮಾತಿನಿಂದಲೂ ಹಿಂಸಿಸಬಾರದು. ಅಪ್ರಿಯವಾದ ಸತ್ಯವನ್ನೆಂದೂ ಅನಗತ್ಯವಾಗಿ ಆಡಬಾರದು. ಕಠಿಣ ಮಾತುಗಳನ್ನು ಆಡುವುದರಿಂದ ಒಬ್ಬನ ಸ್ವಭಾವ ಕಠೋರವಾಗುತ್ತದೆ. ಮಾತಿನ ಮೇಲೆ ಹಿಡಿತವಿಲ್ಲದಿದ್ದರೆ, ನಮ್ಮ ಸಂವೇದನಾಶೀಲತೆ ಹೊರಟುಹೋಗುತ್ತದೆ.
- ಮೃತ್ಯು ಯಾವಾಗಲೂ ಅನಿಶ್ಚಯವಾಗಿರುವುದರಿಂದ ಅವಕಾಶ ಬಂದಾಗಲೆಲ್ಲ ಪುಣ್ಯಕಾರ್ಯಗಳನ್ನು ಮಾಡುತ್ತ ಹೋಗು. ಸೂಕ್ತ ಸಮಯಕ್ಕಾಗಿ ಕಾಯುತ್ತಿರಬೇಡ. ಮೃತ್ಯು ಸಮಾಯಾಸಮಯದ ವಿವೇಚನೆ ಮಾಡುವುದಿಲ್ಲ.
- ಹೆದರಬೇಡ, ಯಾವಾಗಲೂ ಭಗವಂತ ನಿನ್ನನ್ನು ನೋಡಿಕೊಳ್ಳುತ್ತಿದ್ದಾನೆ. ಅವನ ಕೆಲಸ ಮಾಡು. ಸಾಧನೆ ಮಾಡು.